**PW-3**

(ಇಂದು ದಿನಾಂಕಃ 03-07-2025 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು -ಪ್ರತಿವಾದಿ ಪರ ಶ್ರೀ ಡಿ.ಎಸ್.ಬಿ ವಕೀಲರಿಂದಃ</u>**

ನಾನು 1ನೇ ವಾದಿಯ ಸಹೋದರನ ಎಂದರೆ ಸರಿ. ನನ್ನ ಮನೆ ಕಲಭಾಗದಲ್ಲಿ ಇರುತ್ತದೆ. ನಾನು ಮಾತಾ ವೈಭವ ಸೌಹಾರ್ದ ಸಹಕಾರಿ ಸಂಘದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಅದಕ್ಕಿಂತಲೂ ಮೊದಲು ನಾನು ಕುಮಟಾದ ಹಿರಿಯ ವಕೀಲರಾದ ವಿ.ಎನ್ ಶ್ಯಾನಭಾಗರವರ ಕಚೇರಿಯಲ್ಲಿ 8 ವರ್ಷಗಳ ಕಾಲ ಕೆಲಸ ಮಾಡಿರುತ್ತೇನೆ. ವಾದಿಯವರು ಕಾಲುದಾರಿ ಓಡಾಡುವ ವಿಚಾರಕ್ಕೆ ಸಂಬಂಧಪಟ್ಟಂತೆ ದಾವೆಯನ್ನು ಮಾಡಿರುತ್ತಾರೆ. ನನ್ನ ಮಾಹಿತಿಯ ಪ್ರಕಾರ ಸದರಿ ಕಾಲುದಾರಿಯು ಸರ್ವೆ ನಂಬರ.482/2ಡ1, 2ಇ1 ಮುಖಾಂತರ ವಾದಿಯವರ ಜಾಗವಾದ ಸರ್ವೆ ನಂಬರ.482/2ಡ2ನೇದಕ್ಕೆ ಸೇರುತ್ತದೆ. ನಾನು ಮೇಲೆ ತಿಳಿಸಿದ ಸರ್ವೆ ನಂಬರಗಳ ವಿಸ್ತೀರ್ಣ ಹೇಳಲು ನನಗೆ ಬರುವುದಿಲ್ಲ. ಮೇಲೆ ಹೇಳಿರುವ ಸರ್ವೆ ನಂಬರಗಳಲ್ಲಿರುವ ದಾರಿಯು ಪೂರ್ವ ದಿಕ್ಕಿನಿಂದ ಪ್ರಾರಂಭವಾಗಿ ಉತ್ತರ ದಿಕ್ಕಿನಲ್ಲಿರುವ ವಾದಿಯವರ ಮನೆಗೆ ಸೇರುತ್ತದೆ. ಈ ರೀತಿ ಪೂರ್ವ ದಿಕ್ಕಿನಿಂದ ಪ್ರಾರಂಭವಾಗಿ ಉತ್ತರ ದಿಕ್ಕಿನಲ್ಲಿರುವ ವಾದಿಯವರ ಮನೆಗೆ ಸೇರುವವರೆಗೆ ಸದರಿ ಕಾಲುದಾರಿಯಲ್ಲಿ ಮೇಲೆ ತಿಳಿಸಿರುವ ಸರ್ವೇ ನಂಬರಗಳನ್ನು ಹೊರತು ಪಡಿಸಿ ಬೇರೆ ಆಸ್ತಿ ಇರುವುದಿಲ್ಲ. ಸರ್ವೇ ನಂಬರ್.482/2ಇ1 ಮತ್ತು 482/2ಡ1ರ ಪಹಣಿ ಪ್ರತಿಕೆಯಲ್ಲಿ ಪ್ರತಿವಾದಿಯವರ ಹೆಸರು ಇರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿಸಲು 3ನೇ ವಾದಿಯು ವಕೀಲರಿಗೆ ಮಾಹಿತಿಯನ್ನು ನೀಡಿರುತ್ತಾರೆ. 3ನೇ ವಾದಿಯವರು ವಕೀಲರಿಗೆ ನೀಡಿದ ಮಾಹಿತಿಯ ಪ್ರಕಾರ ತಯಾರಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಬರೆಯಲು ನಾನು ವಕೀಲರಿಗೆ ಮಾಹಿತಿಯನ್ನು ನೀಡಿದ್ದು ಇರುವುದಿಲ್ಲ. ನನಗೆ ದಾವಾ ಆಸ್ತಿಗೆ ಸಂಬಂಧಪಟ್ಟ ಯಾವುದೇ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯವರು ಹೇಳುವಂತೆ ದಾವಾ ಆಸ್ತಿ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ

**PW-3**

ಮುಂದುವರಿದು ಸದರಿ ದಾರಿಯು ಅನಾಧಿಕಾಲದಿಂದಲೂ ಇದ್ದಿರುತ್ತದೆ ಎಂದು ನುಡಿದಿರುತ್ತಾರೆ. 1 ವಾದಿ ನನ್ನ ಅಕ್ಕ ಹಾಗೂ 2 ಮತ್ತು 3ನೇ ವಾದಿಯವರು ನನ್ನ ಅಕ್ಕನ ಮಕ್ಕಳಾಗಿರುವುದರಿಂದ ಅವರಿಗೆ ಸಹಾಯ ಆಗಲೆಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರವನ್ನು ಸಲ್ಲಿಸುವ ಪೂರ್ವದಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ಸರ್ವೇ ನಂಬರ್.482/2ಡ1ರಲ್ಲಿ ಒಟ್ಟಿಗೆ 6 ಗುಂಟೆ 12 ಆಣೆ ಕ್ಷೇತ್ರ ಇರುತ್ತದೆ. ಸರ್ವೇ ನಂಬರ್.482/2ಡ1ರ ಅರ್ಧ ಆಸ್ತಿಗೆ ಪ್ರತಿವಾದಿಯವರು ಹಕ್ಕುದಾರರಿದ್ದು, ಉಳಿದ ಅರ್ಧ ಅಂಶಕ್ಕೆ ಶಿವರಾಮ ಗೋವಿಂದ ನಾಯ್ಕರವರು ವಾರಿಸುರುದಾರರು ಇರುತ್ತಾರೆ ಎಂದರೆ ಸರಿ. ಶಿವರಾಮ ಗೋವಿಂದ ನಾಯ್ಕರವರ ವಾರಿಸುದಾರರು ವಹಿವಾಟು ಮಾಡಿಕೊಂಡು ಬರುವ ಜಾಗದಲ್ಲಿ ಕಾಲುದಾರಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂಬರ್.482/2ಡ1ರಲ್ಲಿರುವ ಪ್ರತಿವಾದಿಯವರ ವಹಿವಾಟು ಮಾಡಿಕೊಂಡು ಬರುವ ಜಾಗದ ಪಶ್ಚಿಮಕ್ಕೆ ಶಿವರಾವ ಗೋವಿಂದ ನಾಯ್ಕರವರ ವಹಿವಾಟಿನ ಜಾಗ ಇರುತ್ತದೆ. ಶಿವರಾವ ಗೋವಿಂದ ನಾಯ್ಕರವರ ವಹಿವಾಟಿನಲ್ಲಿರುವ ಜಾಗಕ್ಕೆ ಅವರು ಮೃತ ಪಟ್ಟ ನಂತರ ಅವರ ವಾರಿಸುದಾರರು ಭದ್ರವಾದ ಪಗಾರವನ್ನು ಹಾಕಿರುತ್ತಾರೆ ಎಂದರೆ ಸರಿ. ವಾದಿಯವರ ಮನೆಗೆ ಹೋಗುವ ಕಾಲುದಾರಿಯು ಪ್ರತಿವಾದಿಯವರ ಹಕ್ಕಿನ ಸ್ಥಳದಲ್ಲಿ ಹಾದುಹೋಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ